

ಅಂತರರಾಷ್ಟ್ರೀಯ ಮಟ್ಟದ ಟೂರ್ನಿಗಳು ಅಂಕಗಳನ್ನು ಗಳಿಸಲು, ರ್‍ಯಾಂಕಿಂಗ್ ಮಟ್ಟ ಸುಧಾರಿಸಿಕೊಂಡು ಒಲಿಂಪಿಕ್ಸ್ ಅರ್ಹತೆ ಗಿಟ್ಟಿಸಲು ಬಹುಮುಖ್ಯವಾಗಿವೆ. ಈ ಎಲ್ಲ ಕಾರಣಗಳಿಂದಾಗಿ ಲಕ್ಷ್ಯ ಸೇನ್ ಯಾವ ಟೂರ್ನಿಗಳಲ್ಲಿ ಹೇಗೆ ಪ್ರದರ್ಶನ ನೀಡುತ್ತಾರೆ ಎನ್ನುವುದರ ಮೇಲೆ ಬ್ಯಾಡ್ಮಿಂಟನ್ ಕೋಚ್‌ಗಳು ನಿಗಾ ವಹಿಸಿದ್ದರು.

ಕೆನಡಾ ಟೂರ್ನಿಯಲ್ಲಿ ಪಡೆದ ಗೆಲುವು ಸೇನ್ ಶಕ್ತಿ ಹೆಚ್ಚಿಸಿದ್ದು ಒಂದೆಡೆಯಾದರೆ, ಇದೇ ವರ್ಷದ ಆಲ್ ಇಂಗ್ಲೆಂಡ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಚಾಂಪಿಯನ್ ಆಗಿದ್ದ ಚೀನಾದ ಲೀ ಶೀ ಫೆಂಗ್ ಎದುರು ಫೈನಲ್‌ನಲ್ಲಿ ಗೆಲುವು ಸಾಧಿಸಿದ್ದು ಸೇನ್‌ಗೆ ಖುಷಿ ತಂದುಕೊಟ್ಟಿದೆಯಷ್ಟೇ ಅಲ್ಲದೆ, ಆತ್ಮವಿಶ್ವಾಸವನ್ನೂ ಇಮ್ಮಡಿಸಿದೆ. ಹಿಂದಿನ ನೋವಿಗೆ ಈಗಿನ ಗೆಲುವು ಮುಲಾಮು ಆಗಿದೆ. ಈ ಸಾಧನೆಯಿಂದಾಗಿ ವಿಶ್ವ ಬ್ಯಾಡ್ಮಿಂಟನ್ ಫೆಡರೇಷನ್ ಕ್ರಮಾಂಕ ಪಟ್ಟಿಯಲ್ಲಿ 12ನೇ ಸ್ಥಾನಕ್ಕೆ ಬಡ್ತಿ ಪಡೆದಿದ್ದಾರೆ. ಈ ವರ್ಷ ಸಿಂಗಲ್ಸ್ ಪ್ರಶಸ್ತಿ ಜಯಿಸಿದ ಭಾರತದ ಎರಡನೇ ಆಟಗಾರನಾಗಿದ್ದಾರೆ. ಕಳೆದ ಮೇ ತಿಂಗಳಿನಲ್ಲಿ ಎಚ್.ಎಸ್. ಪ್ರಣಯ್ ಅವರು 'ಮಲೇಷ್ಯಾ ಮಾಸ್ಟರ್ಸ್' ಪ್ರಶಸ್ತಿ ಗೆದ್ದಿದ್ದರು.

### ಬೆಳೆಯುವ ಸಿರಿ ಮೊಳಕೆಯಲ್ಲಿ

ಲಕ್ಷ್ಯ ಸೇನ್ 2021ರಲ್ಲಿ ವಿಶ್ವ ಚಾಂಪಿಯನ್‌ಷಿಪ್‌ನ ಸಿಂಗಲ್ಸ್‌ನಲ್ಲಿ ಕಂಚು, ಥಾಮಸ್ ಕಪ್‌ನ ಪುರುಷರ ತಂಡ ವಿಭಾಗದಲ್ಲಿ ಚಿನ್ನ, ಕಳೆದ ವರ್ಷ ನಡೆದ ಕಾಮನ್‌ವೆಲ್ತ್ ಕ್ರೀಡಾಕೂಟದ ಸಿಂಗಲ್ಸ್‌ನಲ್ಲಿ ಚಿನ್ನ, 2018ರ ಯೂತ್ ಒಲಿಂಪಿಕ್ಸ್‌ನ ಸಿಂಗಲ್ಸ್‌ನಲ್ಲಿ ಕಂಚು, ಏಷ್ಯನ್ ಯೂತ್ ಜೂನಿಯರ್ ಚಾಂಪಿಯನ್‌ಷಿಪ್‌ನಲ್ಲಿ ಒಂದು ಚಿನ್ನ ಹಾಗೂ ಒಂದು ಕಂಚು ಹೀಗೆ ಅನೇಕ ಪದಕಗಳನ್ನು ಜಯಿಸಿದ್ದಾರೆ. ಅದರಲ್ಲಿಯೂ ಕಳೆದ ಐದು ವರ್ಷಗಳ ಅವಧಿಯಲ್ಲಿ ಅವರ ರ್‍ಯಾಕೆಟ್‌ನಿಂದ ಸಿಡಿದ ವೇಗ ಮತ್ತು ನಿಖರವಾದ ರ್‍ಯಾಲಿಗಳಿಗೆ ಒಲಿದ ಸಿಂಗಲ್ಸ್ ಹಾಗೂ ತಂಡ ವಿಭಾಗದ ಒಟ್ಟು 10 ಅಂತರರಾಷ್ಟ್ರೀಯ ಮಟ್ಟದ ಪ್ರಶಸ್ತಿಗಳು ಸೇನ್ ಸಾಮರ್ಥ್ಯಕ್ಕೆ ಕೈಗನ್ನಡಿಯಂತಿವೆ.

ಎಲ್ಲಕ್ಕಿಂತ ಹೆಚ್ಚಾಗಿ ಲಕ್ಷ್ಯ ಸೇನ್ ಜೂನಿಯರ್ ಹಂತದಲ್ಲಿ ತೋರಿದ ಸಾಧನೆ ಗಮನಾರ್ಹವಾದದ್ದು. 2017ರಲ್ಲಿ ನಡೆದ ರಾಷ್ಟ್ರೀಯ ಬ್ಯಾಡ್ಮಿಂಟನ್ ಟೂರ್ನಿಯ ಸಿಂಗಲ್ಸ್‌ನಲ್ಲಿ ಫೈನಲ್ ತಲುಪಿದ್ದಾಗ ಅವರಿಗೆ 15 ವರ್ಷ ವಯಸ್ಸು. ಈ ಮೂಲಕ ಪ್ರಕಾಶ ಪಡುಕೋಣೆ ಹೆಸರಿನಲ್ಲಿದ್ದ ಐದು ದಶಕಗಳ ಸಾಧನೆಯನ್ನು ಅಳಿಸಿ ಹಾಕಿದರು. ಪ್ರಕಾಶ ಅವರು 1971ರಲ್ಲಿ ಚೆನ್ನೈನಲ್ಲಿ ನಡೆದ ರಾಷ್ಟ್ರೀಯ ಟೂರ್ನಿಯಲ್ಲಿ ಫೈನಲ್ ತಲುಪಿದ್ದಾಗ ಅವರಿಗೆ 16 ವರ್ಷ ವಯಸ್ಸಾಗಿತ್ತು. ಹೀಗಾಗಿ ಗುರುವಿನ ಮಾರ್ಗದರ್ಶನ, ಅಪ್ಪನ ನೆರವು, ಬೆಂಗಳೂರಿನ ಕೋಚ್‌ಗಳ ತರಬೇತಿ ಸೇನ್ ಕ್ರೀಡಾ ಬದುಕನ್ನು ಮತ್ತಷ್ಟು ಎತ್ತರಕ್ಕೆ ಕೊಂಡೊಯ್ಯುವುದರಲ್ಲಿ ಅಚ್ಚರಿಯೇನಿಲ್ಲ.

ಪ್ರತಿಕ್ರಿಯಿಸಿ: feedback@sudha.co.in

## ಲಕ್ಷ್ಯ ಸೇನ್‌ಗೆ ಬೆಂಗಳೂರು ತವರು

ಹೆಸರಾಂತ ಬ್ಯಾಡ್ಮಿಂಟನ್ ತರಬೇತುದಾರ ಡಿ ಕೆ. ಸೇನ್ ಹಾಗೂ ಶಿಕ್ಷಕಿ ನಿರ್ಮಲಾ ದಂಪತಿ ಪುತ್ರ ಲಕ್ಷ್ಯ ಸೇನ್ ಹುಟ್ಟಿದ್ದು ಉತ್ತರಾಖಂಡದ ಅಲ್ಮೋರಾದಲ್ಲಿಯಾದರೂ, ಬ್ಯಾಡ್ಮಿಂಟನ್ ಕ್ರೀಡಾ ಬದುಕು ರೂಪಿಸಿಕೊಳ್ಳಲು ಆಯ್ಕೆ ಮಾಡಿಕೊಂಡಿದ್ದು ಬೆಂಗಳೂರನ್ನು. ಇವರ ಸಹೋದರ ಚಿರಾಗ್ ಸೇನ್ ಹಾಗೂ ಲಕ್ಷ್ಯ ಸೇನ್ ಬೆಂಗಳೂರಿನಲ್ಲಿ 'ಪ್ರಕಾಶ ಪಡುಕೋಣೆ ಬ್ಯಾಡ್ಮಿಂಟನ್ ಅಕಾಡೆಮಿ'(ಪಿಪಿಬಿಎ) ಯಲ್ಲಿ ಪಳಗಿದವರು.

2010ರಲ್ಲಿ ಅಕಾಡೆಮಿಯಲ್ಲಿ ನಡೆದ 13 ವರ್ಷದ ಒಳಗಿನವರ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಒಂಬತ್ತೂವರೆ ವರ್ಷದ ಲಕ್ಷ್ಯ ಸೇನ್ ಗಮನಾರ್ಹ ಪ್ರದರ್ಶನ ನೀಡಿ ಅಂತರರಾಷ್ಟ್ರೀಯ ಮಾಜಿ ಬ್ಯಾಡ್ಮಿಂಟನ್ ಆಟಗಾರ ಯು. ವಿಮಲ್ ಕುಮಾರ್ ಗಮನ ಸೆಳೆದರು. ಹತ್ತು ವರ್ಷದವರಿದ್ದಾಗ ಸಿಂಗಪುರದಲ್ಲಿ ನಡೆದ ಟೂರ್ನಿಯಲ್ಲಿ ಪದಕ ಕೊರಳಿಗೇರಿಸಿಕೊಂಡರು. 2014ರಲ್ಲಿ ಬ್ಯಾಡ್ಮಿಂಟನ್ ತಾರೆ ಸೈನಾ ನೆಹ್ವಾಲ್ ಅಭ್ಯಾಸಕ್ಕಾಗಿ ಹೈದರಾಬಾದ್‌ನಿಂದ ಬೆಂಗಳೂರಿಗೆ ಸ್ಥಳಾಂತರಗೊಂಡಿದ್ದರು. ಬೆಂಗಳೂರಿಗೆ ಬರುವ ಎರಡು ವರ್ಷಗಳ ಮೊದಲು ಲಂಡನ್ ಒಲಿಂಪಿಕ್ಸ್‌ನಲ್ಲಿ ಕಂಚು ಜಯಿಸಿದ್ದರಿಂದ ಸೈನಾ ಯುವ ಆಟಗಾರರಿಗೆ ಪ್ರೇರಣೆಯಾಗಿದ್ದರು. ಸೈನಾ ತಮ್ಮ ಅಭ್ಯಾಸಕ್ಕಾಗಿ ಪಡುಕೋಣೆ ಅಕಾಡೆಮಿಯ ಆಟಗಾರರನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದರು. ಆಗ ಲಕ್ಷ್ಯ ಸೇನ್‌ಗೂ ಅವಕಾಶ ಲಭಿಸಿತು. ಸಣ್ಣ ವಯಸ್ಸಿನಲ್ಲಿಯೇ ಒಲಿಂಪಿಕ್ಸ್ ಪದಕ ವಿಜೇತ ಆಟಗಾರ್ತಿಯ ಜೊತೆ ಅಭ್ಯಾಸ ಮಾಡಲು ವೇದಿಕೆ ಸಿಕ್ಕಿದ್ದು ಸೇನ್ ಬದುಕಿಗೆ ಬಹುದೊಡ್ಡ ತಿರುವು ನೀಡಿತು. ಹೀಗಾಗಿ ಈಗಲೂ ಬೆಂಗಳೂರಿನಲ್ಲಿಯೇ ಲಕ್ಷ್ಯ ಸೇನ್ ಅಭ್ಯಾಸ ಮಾಡುತ್ತಾರೆ.

ಸೇನ್ ಅವರ ಕೋಚ್ ಆಗಿದ್ದ ಕೊರಿಯಾದ ಯಾಂಗ್ ಸಂಗ್ ಯೂ ಹೋದ ವರ್ಷ ತಮ್ಮ ದೇಶಕ್ಕೆ ವಾಪಸ್ ಹೋಗಿದ್ದರು. ನಂತರ ಸೇನ್ ಬೆಂಗಳೂರಿನ ಅನೂಪ್ ಶ್ರೀಧರ್ ಮತ್ತು ಕ್ರೀಡೆ ಮತ್ತು ವ್ಯಾಯಾಮ ವಿಜ್ಞಾನ ಪರಿಣತ ಡೆಕ್ಲೈನ್ ಲೀಟಾವೊ ಅವರ ಬಳಿ ಮಾರ್ಗದರ್ಶನ ಪಡೆಯುತ್ತಿದ್ದಾರೆ.